(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಉಪ ಮುಖ್ಯಮಂತ್ರಿ):– ಮಾನ್ಯ ಅಧ್ಯಕ್ಷರೇ, 2007ನೇ ಸಾಲಿನ ಕರ್ನಾಟಕ ಮನೋರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ;

"2007ನೇ ಸಾಲಿನ ಕರ್ನಾಟಕ ಮನೋರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಅನುಬಂಧ–3)

4. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕ, 2007

ಶ್ರೀ ಬಸವರಾಜ್ ಎಸ್.ಹೊರಟ್ಟಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):– ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕ, 2007 ಅನ್ನು ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ಹಾಗೂ ವಿಧಾನ ಪರಿಷತ್ತಿನ ಪರಿಶೀಲನಾ ಸಮಿತಿಯು ಮಾರ್ಪಡಿಸಿದ ರೀತ್ಯಾ ವಿಧೇಯಕವನ್ನು ಪರಿಶೀಲಿಸಿ ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ತಿದ್ದುಪಡಿಗಳೊಂದಿಗೆ ಅಂಗೀಕರಿಸಲ್ಪಟ್ಟ 2007ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ಪುನರ್ ಪರ್ಯಾಲೋಚಿಸಬೇಕೆಂದು ವಿನಂತಿಸುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ:– ನಾವೆಲ್ಲಾ ಅನುಮೋದನೆ ಮಾಡಿದ್ದೇವೆ.

ಅಧ್ಯಕ್ಷರು:– ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕ, 2007 ಅನ್ನು ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ಹಾಗೂ ವಿಧಾನ ಪರಿಷತ್ತಿನ ಪರಿಶೀಲನಾ ಸಮಿತಿಯು ಮಾರ್ಪಡಿಸಿದ ರೀತ್ಯಾ ವಿಧೇಯಕವನ್ನು ಪರಿಶೀಲಿಸಿ ಪುನರ್ ಪರ್ಯಾಲೋಚನಾ ಪ್ರಸ್ತಾಪವನ್ನು ತಿದ್ದುಪಡಿಯೊಂದಿಗೆ ಅಂಗೀಕರಿಸಲು...

ಶ್ರೀ ಎಸ್.ಎಸ್.ಪಾಟೀಲ್:– ಸನ್ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು:– ನೀವು ಆ ದಿವಸ, ಮಾತನಾಡಿದ್ದರಲ್ಲಾ. ಈಗ ಮತ್ತೆ ಮಾತನಾಡುವಿರಾ? ಮಾತನಾಡಿ.

ಶ್ರೀ ಎಸ್.ಎಸ್.ಪಾಟೀಲ್:– ನೀವು ಅಲ್ಲಿಂದ ತಿದ್ದುಪಡಿ ಮಾಡಿ ತಂದಿರುವಿರಲ್ಲಾ, ಆ ತಿದ್ದುಪಡಿಯೊಳಗೆ ಏನು ಹೇಳುತ್ತಾರೆಂದರೆ, ಇಲ್ಲಿ ವಿವಾಹಿತ ಶಿಕ್ಷಕರಾಗಿದ್ದಂಥ ಸಂದರ್ಭದಲ್ಲಿ ಅವರ ಗಂಡ ಅಥವಾ ಹೆಂಡತಿಯು ಜೇಷ್ಠತಾ ಘಟಕದಿಂದ ಹೊರಗೆ ಎಂದು ಭಾವಿಸಿದ್ದಲ್ಲಿ ಆಗ ಆ ಶಿಕ್ಷಕ ಅಥವಾ ಆ ಶಿಕ್ಷಕಿಯನ್ನು ಸ್ಪಷ್ಟ ಖಾಲಿ ಸ್ಥಳ ದೊರೆಯುವುದಕ್ಕೆ ಒಳಪಟ್ಟು ಪ್ರಸ್ತುತ ಜೇಷ್ಠತಾ ಘಟಕದಲ್ಲಿ ಅವರು/ಅವಳು ಮೂರು ವರ್ಷಗಳಿಗಿಂತ ಕಡಿಮೆ ವರ್ಷ ಸೇವೆ ಮಾಡಿದ್ದರೆ ಮಾತ್ರ ತಾವು ಕೂಡಿಸುವವರು. ಅಲ್ಲವೇ? That is wrong. ಅದು ತಪ್ಪು. ನೀವು ಹೇಳುವುದು ಮೂರು ವರ್ಷ ಗಂಡ ಹೆಂಡಿರು ಕೂಡುವ ಹಾಗೆಯೇ ಇಲ್ಲ, ಅವರು ಎಲ್ಲಿ ಇರುತ್ತಾರೆ? ಅಲ್ಲೇ ಇರಬೇಕಾ? ಅಲ್ಲಲ್ಲ, ಇದು ತಪ್ಪು. ತಡೆಯಿರಿ, ಅದು ಒಂದು. ನಾನು ಒಂದು ವಿಚಾರ ಹೇಳುತ್ತೇನೆ. ಅಧ್ಯಕ್ಷರೆ, ಇದು ಬಹಳ ತಪ್ಪಾಗುತ್ತದೆ. ನಾವು ಹೇಳಿದ್ದು ಏನು ಅಂದರೆ ನೀವು ನಮ್ಮಲ್ಲಿ ಆಗಿರುವ ಪ್ರಕರಣವನ್ನು ನೋಡಿದ್ದೀರಿ. ನಿಮ್ಮನ್ನೂ ರಾಜೀನಾಮೆ ಕೇಳಿದ್ದರು, ನನ್ನ ರಾಜೀನಾಮೆಯನ್ನೂ ಕೇಳಿದ್ದರು. ಇದನ್ನು ತಕ್ಷಣ ಕೂಡಿಸಬೇಕು. ಗಂಡ ಇದ್ದಲ್ಲಿ ಎಲ್ಲಿ ಅನುಕೂಲ ಆಗುತ್ತದೋ ಅಲ್ಲಿ ಹೆಂಡತಿಗೆ ಹಾಕಿ ಕೊಟ್ಟು ಬಿಡಿ. ನೀವು ಉತ್ತರ ಹೇಳಿದ ಮೇಲೆ ಮತ್ತೆ ಕೇಳುತ್ತೇನೆ. ಇದು ಒಂದು. ಆಮೇಲೆ ಶಿಕ್ಷಕ, ಶಿಕ್ಷಕಿಯರ ವಿಚಾರ ಮಾತ್ರ ಹೇಳಿದಿರಿ. ಒಬ್ಬ ಶಿಕ್ಷಕಿ ಬೇರೆ department ನವರನ್ನು ಲಗ್ನ ಆಗುತ್ತಾಳೆ. ಆಗ ಆಕೆಯನ್ನು ಹಾಕುವುದಿಲ್ಲವಾ? ಅದೂ ಕೂಡ ತೊಂದರೆ ಆಗುತ್ತದೆ.

ಶ್ರೀ ಅರಗ ಜ್ಞಾನೇಂದ್ರ:– ರೈತನನ್ನು ಮದುವೆ ಆದರೆ?

ಶ್ರೀ ಎಸ್.ಎಸ್.ಪಾಟೀಲ್:– ಅದನ್ನು ಮುಂದೆ ಹೇಳುತ್ತೇನೆ. ಆ ಕಾರಣದಿಂದ ಇದು ತಪ್ಪಾಗುತ್ತದೆ.

ಶ್ರೀ ಬಿ.ಎಸ್.ಹೊರಟ್ಟಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):– ನಾನು ಹೇಳಿ ಬಿಡುತ್ತೇನೆ. ಆಮೇಲೆ ಕೇಳಿ. ಈಗ ಯಾವುದೇ ಸರ್ಕಾರಿ ನೌಕರಿ ಮಾಡುವವರಿಗೆ Probationary Period declare ಆಗಬೇಕೆಂದು ನಿಯಮ ಇದೆ. ಎರಡು ವರ್ಷಕ್ಕೆ declare ಆಗಿರಬೇಕು. ಎರಡು ವರ್ಷಕ್ಕಿಂತ ಮೊದಲು ಮಾಡಲಿಕ್ಕೆ ಬರುವುದೇ ಇಲ್ಲ. ಎರಡು ವರ್ಷದ ನಂತರ 6 ತಿಂಗಳ ಅವಧಿ ಇದೆ, 8 ತಿಂಗಳ ಅವಧಿ ಇದೆ, ತಕರಾರು ಇರುತ್ತದೆ. ಅದರ ಸಲುವಾಗಿ ಒಂದು ವರ್ಷ ಹೆಚ್ಚಿಗೆ ಕೊಟ್ಟಿದ್ದೇವೆ. ಮೂರು ವರ್ಷ ಎಂದು ಇದೆ. ಎರಡು ವರ್ಷದ Probationary Period ಇಲ್ಲದೇ ಯಾವುದೇ ಸರ್ಕಾರಿ ನೌಕರನಿಗೆ permanent ಆಗಲು ಕನಿಷ್ಠ ಎರಡು ವರ್ಷ ಕನಿಷ್ಠ ಬೇಕು. ಅದಾದ ನಂತರ ಮಾಡುತ್ತೇವೆ. ಅದರ ಸಲುವಾಗಿ ಮಾಡಿದ್ದೇನೆ. Probationary Period declare ಆಗಬೇಕು, ಅದಕ್ಕೆ ಮಾಡಿದ್ದು.

ಶ್ರೀ ಜೆ.ಸಿ.ಮಾಧುಸ್ವಾಮಿ:– ಸಾರ್, ಇದು ಪಾಸ್ ಆಗಿರುವ ಬಿಲ್, ಆ ಹೌಸ್‌ನಲ್ಲಿ ಸೆಲೆಕ್ಟ್ ಕಮಿಟಿ ಮುಂದೆ ಹೋಗಿರುವ ಬಿಲ್ಲು. ಸೆಲೆಕ್ಟ್ ಕಮಿಟಿ ಶಿಫಾರಸ್ ಬಂದ ಮೇಲೆ ಅಲ್ಲಿ ಚರ್ಚೆ ಆಗಿದೆ. ಸೆಲೆಕ್ಟ್ ಕಮಿಟಿ ಮಾಡಿದ ಮೇಲೆ ಸಾಮಾನ್ಯವಾಗಿ ಮತ್ತೆ ಅದನ್ನು ಚರ್ಚೆ ಮಾಡಬಾರದು, ಅದು ಒಂದು ಸಂಪ್ರದಾಯ. ಅದರ ಮೇಲೆ ತಮಗೆ ಬಿಟ್ಟಿದ್ದು.

ಅಧ್ಯಕ್ಷರು:– ಅವರದ್ದು ಏನೋ ಕೃಷಿಕರು, ಅದೂ ಇದೂ ಎಂದು ಇದೆಯಲ್ಲಾ, ಅದನ್ನು ಹೇಳಿ.

ಶ್ರೀ ಎಸ್.ಎಸ್.ಪಾಟೀಲ್:– ನಾವು ಒಪ್ಪುವುದಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:– ಸಾರ್, ನೀವು ಒಪ್ಪುವುದಿಲ್ಲ, ನಾವೂ ಒಪ್ಪುವುದಿಲ್ಲ. ನಾವು ಗಲಾಟೆ ಮಾಡಿದ್ದು, objection ಮಾಡಿದ್ದು ಒಂದಕ್ಕೆ. ಬಿಲ್ ಗೊಸ್ಕರ ಅಲ್ಲ. ಇದನ್ನು Joint Select Committee ಗೆ ರೆಫರ್ ಮಾಡಲಾಗಿತ್ತು.

ಶ್ರೀ ಬಿ.ಎಸ್.ಹೊರಟ್ಟಿ:– ನಾವು ಏನು ಮಾಡಿದ್ದೇವೆಂದರೆ ಬೇಸಾಯಗಾರ ಗಂಡನಿದ್ದರೂ ಸಹಿತ ಇದರಲ್ಲಿ ವರ್ಗಾವಣೆ ಮಾಡುವಂತಹ ಪ್ರಾವಿಷನ್ ಮಾಡಿದ್ದೇವೆ.

ಅಧ್ಯಕ್ಷರು:– ಅದು ಹೇಗೆ ಆಗುತ್ತದೆ? 50% ಹೆಣ್ಣು ಮಕ್ಕಳು ತೆಗೆದುಕೊಳ್ಳುತ್ತಿದ್ದಾರೆ. ಬರುತ್ತಾ ಬರುತ್ತಾ ಏನಾಗಿದೆ? more than 50% ಆದಾಗ ನೀವು ಅಲ್ಲಲ್ಲೇ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನೀವು ಪ್ರಾಕ್ಟಿಕಲ್ ಆಗಿ ಯೋಚನೆ ಮಾಡಿ. ಸುಮ್ಮನೇ ಎಂಥೆಂಥಹುದೋ ಮಾಡಿಕೊಂಡು ಏನೇನೋ ಮಾಡುತ್ತೀರಿ.

ಶ್ರೀ ಬಿ.ಎಸ್.ಹೊರಟ್ಟಿ:– ಎಲ್ಲೆಲ್ಲಿ ಅನುಕೂಲತೆಗಳು ಇದೆ, ಅಲ್ಲಿ ಮಾಡಬಹುದು.

ಅಧ್ಯಕ್ಷರು:– ಹಳ್ಳಿಗಳಲ್ಲಿ ಎಲ್ಲಾ ಕಡೆ ಹಾಕುವುದಕ್ಕೆ ಆಗುತ್ತದಾ? ಗಂಡ ಇರುವ ಕಡೆನೇ ಹಾಕುವುದಕ್ಕೆ ಆಗುತ್ತದಾ? ನೀವು ಪ್ರಾಕ್ಟಿಕಲ್ ಆಗಿ ಹೇಳಿ.

ಶ್ರೀ ಬಿ.ಎಸ್.ಹೊರಟ್ಟಿ:– ನನ್ನ ಮಾತೂ ಯಾರು ಕೇಳುವವರಿಲ್ಲ. ನಾನು ಹೇಳುತ್ತೇನೆ ಸಾರ್. ಎಲ್ಲೆಲ್ಲಿ ಸ್ಥಳಗಳು ಖಾಲಿ ಇರುತ್ತವೆ? ಅಲ್ಲಲ್ಲಿ ಮಾಡಲಿಕ್ಕೆ ಸಾಧ್ಯವಾದರೆ ಮಾಡುತ್ತೇವೆ. ಅದನ್ನು ಹೇಳಿದ್ದೇವೆ. ಅದೇ ರೀತಿ ಮಾಡಿ ಎಲ್ಲಾ ರೀತಿಯಿಂದ ಅನುಕೂಲತೆಗಳನ್ನು ಮಾಡಿಕೊಡುವಂತಹ ವ್ಯವಸ್ಥೆಗಳನ್ನು ಮಾಡಿದ್ದೇವೆ. ಮತ್ತೆ ಮೆಡಿಕಲ್ ಮೇಲೆ ಇದ್ದಂತಹವರಿಗೆ ಮಾಡಿದ್ದೇವೆ. ಎಲ್ಲಾ ರೀತಿಯಿಂದ ಮಾಡಿದ್ದೇವೆ. ದಯಮಾಡಿ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್:– ಒಪ್ಪಿಗೆಗೆ ನಾವು ತಕರಾರು ಮಾಡಲಿಕ್ಕೆ ಹತ್ತಿಲ್ಲ.

ಅಧ್ಯಕ್ಷರು:– ಎಲ್ಲಾ ಆಗಿದೆ ಬಿಡಿ ಪಾಟೀಲರೆ.

ಶ್ರೀ ಎಸ್.ಎಸ್. ಪಾಟೀಲ್:– ಕಾಯಿದೆ ಮಂತ್ರಿಗಳನ್ನು ನಾನು ಕೇಳುತ್ತಿದ್ದೇನೆ.

ಶ್ರೀ ಬಿ.ಎಸ್.ಹೊರಟ್ಟಿ:– ಸಾರ್, ನಿಯಮಗಳನ್ನು ಮಾಡುವಾಗ ಎಲ್ಲವನ್ನೂ ಅಳವಡಿಸುತ್ತೇವೆ.

(ಗೊಂದಲ)

ಶ್ರೀ ಎಸ್.ಎಸ್.ಪಾಟೀಲ್:– ನಾನು ಕಾಯಿದೆ ಮಂತ್ರಿಗಳಿಗೆ ಹೇಳುವುದು

ಶ್ರೀ ಎನ್.ಧರ್ಮಸಿಂಗ್:– ಈ ಮನೆಯಲ್ಲಿ ಇದರ ಬಗ್ಗೆ ಚರ್ಚೆ ಆಯಿತು. ಎಲ್ಲರೂ ಕೂಡ ಪ್ರತಿಭಟಿಸಿದ್ದೇವೆ. ಅವರು ಏನು ಮಾಡಿದ್ದಾರೆ ಎಂದರೆ ಮಾನ್ಯ ಹೊರಟ್ಟಿಯವರು ಬಹಳ ಚಾಲಾಕು. ಅಲ್ಲಿ ಹೋಗಿದ್ದಾರೆ. ಅಲ್ಲಿ ಹೋಗಿ ಒಪ್ಪಿಗೆ ಪಡೆದು ಬಂದರು.

ಶ್ರೀ ಬಿ.ಎಸ್.ಹೊರಟ್ಟಿ:– ಇಲ್ಲೂ ಒಪ್ಪಿಗೆ ಪಡೆದಿದ್ದೇನೆ.

ಶ್ರೀ ಎನ್.ಧರ್ಮಸಿಂಗ್:– ಇಲ್ಲ ಒಪ್ಪಿಗೆ ಅಲ್ಲ. ಹೇಳುವುದನ್ನು ಕೇಳಿ. ಅದಕ್ಕೆ ಮಾನ್ಯ ಮಾಧುಸ್ವಾಮಿ, ಶ್ರೀರಾಮರೆಡ್ಡಿ, ವಾಟಾಳ್ ನಾಗರಾಜ್ ಎಲ್ಲರೂ ಕೂಡ ಪ್ರತಿಭಟನೆ ಮಾಡಿದ್ದಾರೆ. ನಮ್ಮದೇನೂ ಮಾನ, ಮರ್ಯಾದೆ ಇಲ್ಲ. ನೀವು ಹೋಗಿ ಹಾಗೆ ಎಂದು ಬಂತು. ಇವತ್ತು ಏಕೋ ಅವರೇ ಏಕಾಏಕಿ ಒಪ್ಪಿ ಬಿಟ್ಟಿದ್ದಾರೆ, ಮಾಡಿ ಎಂದು ಹೇಳುತ್ತಿದ್ದಾರೆ. ಮಾಡಿರಿ ನಮ್ಮದೇನೂ ಅಭ್ಯಂತರವಿಲ್ಲ. ಇದರ ಬಗ್ಗೆ ನಮ್ಮದೇನೂ ಇಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ:– ಕ್ಷಮಿಸಬೇಕು, ನಾವು ಏಕಾ ಏಕಿ ಒಪ್ಪಿಲ್ಲ. ಅಧ್ಯಕ್ಷರು ಸಭೆಗೆ ಕರೆಸಿ ಮಿನಿಸ್ಟರ್ ಹೌಸ್‌ನಲ್ಲಿ ಕ್ಷಮಾಪಣೆ ಕೇಳಿದ ಮೇಲೆ ಇದನ್ನು ಲಂಬಿಸುವುದು ದೊಡ್ಡತನ ಅಲ್ಲ ಎಂದು ಅಧ್ಯಕ್ಷರು ಹೇಳಿದ್ದಕ್ಕೆ ನಾವು ಲಂಬಿಸುತ್ತಿಲ್ಲ. ಸಾರ್ ತಾವು ಹೇಳಬೇಕು. ಅವರ ಸಮಕ್ಷಮ ಸಭೆ ಆಗಿ, ಅವರು apolise ಮಾಡಿದ್ದಾರೆ. ದೊಡ್ಡದು ಮಾಡಬೇಡಿ ಎಂದಿದ್ದಕ್ಕೆ ನಾವು ಒಪ್ಪಿದ್ದೇವೆ. ಇವತ್ತೂ ನಮ್ಮದು ಅದೇ ನಿಲುವು.

ಶ್ರೀ ಎಂ.ಪಿ.ಪ್ರಕಾಶ್:– ಹೌದು, ಇದನ್ನು ದೊಡ್ಡದು ಮಾಡಬಾರದು ಎಂದು ಹೇಳಿದ್ದರಿಂದ ನಿಯಮಾವಳಿಗಳನ್ನು ಬದಲಿಗೆ ಇಟ್ಟು ಅದನ್ನು ಇವತ್ತು ನಲ್ಲಿಸಿರತಕ್ಕದ್ದು.

ಶ್ರೀ ಜೆ.ಸಿ.ಮಾಧುಸ್ವಾಮಿ:– ಅವರು ದೊಡ್ಡದು ಮಾಡಬೇಡಿ ಎಂದು ಹೇಳಿದ್ದರಿಂದ ಸುಮ್ಮನೇ ಕುಳಿತ್ತಿದ್ದೇವೆ.

ಅಧ್ಯಕ್ಷರು:– ಆಯಿತು ಬಿಡಿ, ಅವತ್ತು ನೀವೇ ವೆಲ್ ಕಂ ಮಾಡಿ ಮತ್ತೆ ಮತ್ತೆ ಮಾತನಾಡುತ್ತಿದ್ದೀರಲ್ಲ.

ಶ್ರೀ ಎಸ್.ಎಸ್.ಪಾಟೀಲ್:– ನಾವು ವೆಲ್ ಕಂ ಮಾಡಿದ್ದೇವೆ, ಇಲ್ಲ ಎಂದು ಹೇಳುವುದಿಲ್ಲ. ಅದನ್ನು ಮೊದಲೇ ವೆಲ್ ಕಂ ಮಾಡಿ ಇಲ್ಲಿಂದ ಕಳುಹಿಸಿ ಬಿಟ್ಟಿದ್ದೇವೆ. ನಮ್ಮದು ತಕರಾರು ಇಲ್ಲ. ಇದರಲ್ಲಿ ಕೆಲವು ವಿಚಾರ ಇದೆ. ಹೆಣ್ಣು ಮಕ್ಕಳ ಪರಿಸ್ಥಿತಿ ಬಗ್ಗೆ. ತಾವು ಕೂಡ ಹೆಣ್ಣು ಮಕ್ಕಳ ತಂದೆ. ಇದನ್ನು ವಿಚಾರ ಮಾಡಿರಿ. ನಾನು ಕಾಯಿದೆ ಮಂತ್ರಿಗಳಿಗೆ ಕೇಳುತ್ತಿದ್ದೇನೆ. ಎರಡು ವರ್ಷ ಪ್ರೊಬೇಷನ್ ಪೀರಿಯಡ್ ನಲ್ಲಿದ್ದವರಿಗೆ ವರ್ಗ ಮಾಡಲಿಕ್ಕೆ ಬರುವುದಿಲ್ಲ. ಬರದೇ ಇದ್ದರೆ ಕಾಯಿದೆ ತಿದ್ದುಪಡಿ, ಹೆಣ್ಣು ಮಕ್ಕಳಿಗೆ exemption ಕೊಡಿ. ಇಲ್ಲದೇ ಇದ್ದರೆ ಬಹಳ ತೊಂದರೆ ಇದೆ ಸಾರ್ ಇಲ್ಲಿ ಯಾರೂ ಒಬ್ಬರೂ ಹೆಣ್ಣು ಮಕ್ಕಳು ಇಲ್ಲ. ಇದ್ದಿದ್ದರೆ ನಿಮಗೆ ಅದು ತಿಳಿಯುತ್ತಿತ್ತು. ನಾವು ಇದಕ್ಕೆ ತಕರಾರು ಮಾಡುತ್ತಿಲ್ಲ. ಅನುಕೂಲ ಮಾಡಿ ಕೊಡಿ ಎಂದು ಕೇಳುತ್ತಿದ್ದೇವೆ.

ಅಧ್ಯಕ್ಷರು:– ಹೇಳುತ್ತಾರೆ, ಅವೆಲ್ಲಾ impractical things ಸುಮ್ಮನೇ. ಈಗೇನಾಗಿದೆ? break the gallery ಎಂದು ಕೆಲವರು. It is not correct. ಹೇಳಿ.

ಶ್ರೀ ಕೆ.ಶ್ರೀನಿವಾಸ ಗೌಡ:– ಅಧ್ಯಕ್ಷರು ಆ ತರಹ ಅಭಿಪ್ರಾಯ ಕೊಡುತ್ತಿದ್ದಾರೆ, ಇನ್ನೊಂದು ಸಾರಿ ಯೋಚನೆ ಮಾಡಿ.

ಶ್ರಿ ಎಂ.ಪಿ.ಪ್ರಕಾಶ್:– ನೋಡಿ ಮಹಿಳೆಯರಿಗೆ ತೊಂದರೆ ಆಗುತ್ತಿದೆ ಎಂದು ಇದೆ. ಮದುವೆ ಆಗಬಹುದು. ಬೇರೆ ಹುಡುಗರು ಕೂಡ ಶಿಕ್ಷಕಿಯರನ್ನು ಮದುವೆ ಆಗಬಹುದು. ಈ ಎಲ್ಲಾ ವಿಚಾರಗಳ ಬಗ್ಗೆ ನಿಯಮಾವಳಿಯಲ್ಲಿ ಅದನ್ನು ತರುತ್ತೇವೆ ಎನ್ನುತ್ತಾರೆ. ನೀವೇನು ಅಭಿಪ್ರಾಯ ವ್ಯಕ್ತ ಮಾಡಿದ್ದೀರಿ? ಮೂರು ವರ್ಷದ ಅವಧಿ ಎನ್ನತಕ್ಕದ್ದರಲ್ಲಿ ಎರಡು ವರ್ಷ ಪ್ರೊಬೇಷನರಿ ಪೀರಿಯಡ್ ಇದ್ದೇ ಇರುತ್ತದೆ. ಆ ಸಮಯದಲ್ಲಿ ಏನೂ ಮಾಡುವುದಕ್ಕೆ ಆಗುವುದಿಲ್ಲ. ಇನ್ನು ಎರಡು ಮತ್ತು ಮೂರನೇ ವರ್ಷದ ಮಧ್ಯಂತರದ ಅವಧಿಯಲ್ಲಿ ನಿಯಮಾವಳಿಗಳಲ್ಲಿ ತಮ್ಮ ಸಲಹೆಯನ್ನು ಅಳವಡಿಸಿಕೊಳ್ಳುತ್ತಾರೆ. ಬೇರೆ ರೈತರ ಮಕ್ಕಳನ್ನು ಅಥವಾ ಖಾಸಗಿ

ವಲಯದಲ್ಲಿ ಇದ್ದಂತಹವರನ್ನು ಮದುವೆ ಆದಾಗ ಅಲ್ಲಿ ಕೂಡ ತಂದು ಕೊಡುತ್ತಾರೆ. ಆದ್ದರಿಂದ ನಿಮ್ಮ ಆತಂಕಗಳನ್ನು ಇವರು ನಿಯಮಾವಳಿಯಲ್ಲಿ ನಿವಾರಣೆ ಮಾಡುತ್ತಾರೆ.

ಪುನರ್ ಪರ್ಯಾಲೋಚನಾ ಪ್ರಸ್ತಾವ

2007ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕ

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ:

"ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕರಿಸಲ್ಪಟ್ಟು ವಿಧಾನ ಪರಿಷತ್ತಿನ ಪರಿಶೀಲನಾ ಸಮಿತಿಯಿಂದ ಪರಿಶೀಲಿಸಲ್ಪಟ್ಟು, ವಿಧಾನ ಪರಿಷತ್ತಿನಲ್ಲಿ ತಿದುಪಡಿಯೊಂದಿಗೆ ಅಂಗೀಕರಿಸಲ್ಪಟ್ಟ ರೂಪದಲ್ಲಿರುವ 2007ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ಪುನರ್ ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪುನರ್ ಪರ್ಯಾಲೋಚಿಸುವುದು

ಖಂಡ 2ರಿಂದ 13ರವರೆಗೆ

ಅಧ್ಯಕ್ಷರು:– "ಖಂಡ 2ರಿಂದ 13ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ".

ಖಂಡ 1 ಇತ್ಯಾದಿ:–

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ:

"ಮೊದಲನೆಯ ಖಂಡ, ಹೆಸರು, ಅವತರಣಿಕೆಗಳು ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ಹೆಸರು, ಅವತರಣಿಕೆಗಳು ವಿಧೇಯಕಕ್ಕೆ ಸೇರಿಸಲಾಯಿತು)

ಪುನರ್ ಪ್ರಸ್ತಾವದ ಅಂಗೀಕಾರ

ಶ್ರೀ ಬಿ.ಎಸ್.ಹೊರಟ್ಟಿ (ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ಸದರಿ ವಿಧೇಯಕವನ್ನು ಅಂಗೀಕರಿಸಬೇಕೆಂದು ವಿನಂತಿಸುತ್ತೇನೆ.

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ:

"2007ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ವಿಧಾನ ಪರಿಷತ್ತಿನಲ್ಲಿ ತಿದ್ದುಪಡಿಗಳೊಂದಿಗೆ ಅಂಗೀಕರಿಸಲ್ಪಟ್ಟ ರೀತ್ಯಾ ಈ ಸಭೆಯು ಪುನರ್ ಅಂಗೀಕರಿಸುವುದು".

ಪುನರ್ ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಅನುಬಂಧ–4)

ಶ್ರೀ ಬಿ.ಎಸ್.ಹೊರಟ್ಟಿ:– ಎಲ್ಲಾ ಗೌರವಾನ್ವಿತ ಸದಸ್ಯರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ:– ಸಾರ್, ನನ್ನದೊಂದು ವಿಚಾರ ಇದೆ, ತೆಗೆದುಕೊಳ್ಳಿ. ನಾವು ಮೂರು ದಿವಸದಿಂದ ನಿಮಗೆ ಕೇಳುತ್ತಿದ್ದೇವೆ.

ಅಧ್ಯಕ್ಷರು:– ಬಿಲ್ಸ್ ಆದ ತಕ್ಷಣ ಅವಕಾಶ ಕೊಡುತ್ತೇನೆ.

(5) ಕರ್ನಾಟಕ ತೋಟಗಾರಿಕಾ ವಿಶ್ವವಿದ್ಯಾನಿಲಯ ವಿಧೇಯಕ, 2007 ಮಂಡನೆಗೆ ಅನುಮತಿ ಕೋರಿಕೆ ಹಾಗೂ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಶಶಿಕಾಂತ ಅಕ್ಕಪ್ಪ ನಾಯಿಕ (ತೋಟಗಾರಿಕಾ ಸಚಿವರು): ಮಾನ್ಯ ಅಧ್ಯಕ್ಷರೆ, 2007ರ ಕರ್ನಾಟಕ ತೋಟಗಾರಿಕಾ ವಿಶ್ವವಿದ್ಯಾನಿಲಯ ವಿಧೇಯಕವನ್ನು ಸಭೆ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.